ಆ) ಜೇವರ್ಗಿ ಕ್ಷೇತ್ರದಲ್ಲಿ ಅಳವಡಿಸಿರುವ ಎಲ್ಲಾ ಪರಿವರ್ತಕಗಳು ಚಾಲನೆಯಲ್ಲಿವೆ ಮತ್ತು 225 ವಿಫಲವಾದ ಪರಿವರ್ತಕಗಳನ್ನು ದುರಸ್ತಿ ಮಾಡಿ ಮರು ಅಳವಡಿಸಲಾಗಿದೆ.

ಇ) ಜೇವರ್ಗಿ ಕ್ಷೇತ್ರದಲ್ಲಿ ಏಪ್ರಿಲ್–09 ರಿಂದ ಫೆಬ್ರವರಿ–10 ವರೆಗೆ ಹೊಸ ಪರಿವರ್ತಕಗಳು ಅಳವಡಿಸಲಾದ ಪರಿವರ್ತಕಗಳ ವಿವರ ಈ ಕೆಳಗಿನಂತಿದೆ :–

ಕ್ರಮ ಸಂಖ್ಯೆ	ಸಾಮರ್ಥ್ಯ ಕೆ.ವಿ.ಎ	ಸಂಖ್ಯೆ
1	25	26
2	63	40
3	100	01
4	250	01
	ಒಟ್ಟು	**49**

ಈ) ಜೇವರ್ಗಿ ಕ್ಷೇತ್ರದಲ್ಲಿ ಏಪ್ರಿಲ್–09 ರಿಂದ ಫೆಬ್ರವರಿ–10 ವರೆಗೆ ಪರಿವರ್ತಕಗಳ ದುರಸ್ತಿಗೆ ಖರ್ಚಾದ ಹಣ ರೂ. 28.06 ಲಕ್ಷಗಳು.

ರಾಜ್ಯದ ಹೊಸ ವಿಮಾನ ನಿಲ್ದಾಣಗಳ ಸ್ಥಾಪನೆ

131 (290) ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ) : ಮಾನ್ಯ ಪ್ರವಾಸೋದ್ಯಮ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಯಾವ ಯಾವ ಸ್ಥಳಗಳಲ್ಲಿ ವಿಮಾನ ನಿಲ್ದಾಣಗಳನ್ನು ಸ್ಥಾಪಿಸಲಾಗುವುದು; ಇದಕ್ಕಾಗಿ ಇಲ್ಲಿಯವರೆವಿಗೆ ಸರ್ಕಾರ ಯಾವ ಯಾವ ಕಾಮಗಾರಿಗಳಿಗಾಗಿ ಎಷ್ಟು ಹಣವನ್ನು ವೆಚ್ಚ ಮಾಡಿದೆ (ನಿಲ್ದಾಣವಾರು ವಿವರಗಳನ್ನು ಒದಗಿಸುವುದು);

ಆ) ಬೀದರ್‌ನಲ್ಲಿ ವಿಮಾನ ನಿಲ್ದಾಣವನ್ನು ಪ್ರಾರಂಭಿಸುವ ಕೆಲಸ ಈಗ ಯಾವ ಹಂತದಲ್ಲಿದೆ;

ಇ) ರಾಜ್ಯದಲ್ಲಿ ಸ್ಥಾಪಿತಗೊಳ್ಳಲಿರುವ ವಿಮಾನ ನಿಲ್ದಾಣಗಳನ್ನು ನಿಗಧಿತ ಅವಧಿಯಲ್ಲಿ ಪ್ರಾರಂಭಿಸಲು ಸರ್ಕಾರಕ್ಕೆ ಇರುವ ತೊಂದರೆಗಳೇನು;

ಈ) ಈ ಸಂಬಂಧವಾಗಿ ಇಲ್ಲಿಯವರೆವಿಗೆ ಕೇಂದ್ರ ಸರ್ಕಾರದ ಜೊತೆ ಎಷ್ಟು ಬಾರಿ ಚರ್ಚಿಸಲಾಗಿದೆ ಹಾಗೂ ಪತ್ರ ವ್ಯವಹಾರಗಳನ್ನು ನಡೆಸಲಾಗಿದೆ;

ಉ) ರಾಜ್ಯದ ಯಾವ ಯಾವ ಸ್ಥಳಗಳಲ್ಲಿ ವಿಮಾನ ನಿಲ್ದಾಣಗಳನ್ನು ಸ್ಥಾಪಿಸಲು ಕೇಂದ್ರ ಸರ್ಕಾರ ಇಲ್ಲಿಯವರೆವಿಗೆ ಅನುಮತಿಯನ್ನು ನೀಡಿದೆ ಹಾಗೂ ಈ ವಿಮಾನ ನಿಲ್ದಾಣಗಳನ್ನು ಶೀಘ್ರವಾಗಿ ಪ್ರಾರಂಭಿಸಲು ಸರ್ಕಾರದ ಮುಂದಿರುವ ಕ್ರಮಗಳೇನು?

ಶ್ರೀ ಜಿ. ಜನಾರ್ಧನರೆಡ್ಡಿ (ಪ್ರವಾಸೋದ್ಯಮ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು) :

ಅ) ರಾಜ್ಯದ ಈ ಕೆಳಕಾಣಿಸಿದ ಸ್ಥಳಗಳಲ್ಲಿ ವಿಮಾನ ನಿಲ್ದಾಣಗಳನ್ನು ಖಾಸಗಿ ಸಾರ್ವಜನಿಕ ಸಹಭಾಗಿತ್ವದ (ಪಿಪಿಪಿ) ಆಧಾರದ ಮೇಲೆ ಸ್ಥಾಪಿಸಲು ಕ್ರಮ ವಹಿಸಲಾಗುತ್ತಿದೆ:–

1. ಗುಲ್ಬರ್ಗಾ
2. ಶಿವಮೊಗ್ಗ
3. ಬಿಜಾಪುರ
4. ಹಾಸನ
5. ಬಳ್ಳಾರಿ

ಈ ವಿಮಾನ ನಿಲ್ದಾಣಗಳ ಭೂಸ್ವಾಧೀನ, ಯುಟಿಲಿಟಿ ಸ್ಥಳಾಂತರ ಹಾಗೂ ಪುನರ್ವಸತಿಗಾಗಿ ಈ ಕೆಳಕಂಡಂತೆ ಹಣ ಬಿಡುಗಡೆ ಮಾಡಲಾಗಿದೆ:–

ಕ್ರ.ಸಂ.	ವಿಮಾನ ನಿಲ್ದಾಣ	ಬಿಡುಗಡೆ ಮಾಡಿದ ಹಣ (ಲಕ್ಷಗಳಲ್ಲಿ)
1	ಗುಲ್ಬರ್ಗಾ	1515.04
2	ಶಿವಮೊಗ್ಗ	2598.00
3	ಬಿಜಾಪುರ	2950.00
4	ಹಾಸನ	799.00
5	ಬಳ್ಳಾರಿ	1200.00
	ಒಟ್ಟು	**9062.04**

ಆ) ಬೀದರ್‌ನಲ್ಲಿ ಈಗಾಗಲೇ ನಾಗರೀಕ ವಿಮಾನ ಯಾನ ಸೇವೆಗಾಗಿ ಹೊಸ ಟರ್ಮಿನಲ್ ಕಟ್ಟಡವನ್ನು ನಿರ್ಮಿಸಲಾಗಿದೆ. ನಾಗರೀಕ ವಿಮಾನ ಯಾನ ಸೇವೆಯನ್ನು ಪ್ರಾರಂಭಿಸಲು ನಾಗರೀಕ ವಿಮಾನಯಾನ ಮಂತ್ರಾಲಯದಿಂದ ಅನುಮೋದನೆ ನಿರೀಕ್ಷಿಸಲಾಗುತ್ತಿದೆ.

ಇ) ಪ್ರಾರಂಭದಲ್ಲಿ ಭೂಸ್ವಾಧೀನಕ್ಕೆ ಕೆಲವು ಸಮಸ್ಯೆಗಳಿದ್ದವು. ಈ ವಿಷಯವನ್ನು ಸಾಧ್ಯವಾದ ಮಟ್ಟಿಗೆ ಇತ್ಯರ್ಥಗೊಳಿಸಿದೆ. ಶಿವಮೊಗ್ಗ, ಗುಲ್ಬರ್ಗಾ ಹಾಗೂ ಬಿಜಾಪುರಗಳಲ್ಲಿ ಕಾಮಗಾರಿ ಕೈಗೊಳ್ಳುವಲ್ಲಿ ಪಿಪಿಪಿ ಭಾಗೀದಾರರು ವಿಳಂಬ ಮಾಡಿದ್ದಾರೆ. ಈ ಬಗ್ಗೆ ಸತತ ಮನಗಾಣಿಕಾ ಕ್ರಮ ವಹಿಸಲಾಗಿದ್ದು, ಈಗ ಸದರಿಯವರು ಕಾಮಗಾರಿಯನ್ನು ಪ್ರಾರಂಭಿಸುವ ಹಂತದಲ್ಲಿದ್ದಾರೆ. ಬೀದರ್ ವಿಮಾನ ನಿಲ್ದಾಣದಲ್ಲಿ ವಿಮಾನ ಹಾರಾಟವನ್ನು ಪ್ರಾರಂಭಿಸಲು ನಾಗರೀಕ ವಿಮಾನಯಾನ ಮಂತ್ರಾಲಯದ ಅನುಮೋದನೆಯನ್ನು ರಾಜ್ಯ ಸರ್ಕಾರವು ನಿರೀಕ್ಷಿಸುತ್ತಿದೆ.

ಈ) ಬೀದರ್ ವಿಮಾನ ನಿಲ್ದಾಣದ ಕಾರ್ಯಾಚರಣೆಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರವು ನಾಗರೀಕ ವಿಮಾನಯಾನ ಮಂತ್ರಾಲಯಕ್ಕೆ ದಿನಾಂಕ: 19.05.2009 ರಲ್ಲಿ ಪತ್ರವನ್ನು ಬರೆದಿದೆ.

ಉ) ರಾಜ್ಯದಲ್ಲಿ ಗುಲ್ಬರ್ಗಾ, ಶಿವಮೊಗ್ಗ, ಬಿಜಾಪುರ ಹಾಗೂ ಹಾಸನ ನಿಲ್ದಾಣಗಳನ್ನು ಸ್ಥಾಪಿಸಲು ಕೇಂದ್ರ ಸರ್ಕಾರವು ತಾತ್ವಿಕ ಅನುಮೋದನೆಯನ್ನು ನೀಡಿರುತ್ತದೆ. ಈ ಮೇಲಿನ ವಿಮಾನ ನಿಲ್ದಾಣಗಳಿಗೆ ಅಗತ್ಯವಿರುವ ಜಮೀನನ್ನು ರಾಜ್ಯ ಸರ್ಕಾರವು ಸ್ವಾಧೀನಪಡಿಸಿಕೊಂಡು ಅಭಿವೃದ್ಧಿದಾರರಿಗೆ ನೀಡುವ ಕ್ರಮ ವಹಿಸಲಾಗುತ್ತಿದೆ.

ಇಂಡಿಯಲ್ಲಿ ಪೊಲೀಸ್ ಪೆರೇಡ್ ಗ್ರೌಂಡ್‌ಗೆ ಕಾಂಪೌಂಡ್ ಗೋಡೆ ನಿರ್ಮಿಸುವುದು.

123 (416) ಡಾ॥ ಬಗಲಿ ಸಾರ್ವಭೌಮ ಸಾತಗೌಡ (ಇಂಡಿ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಇಂಡಿಯಲ್ಲಿನ ಪೊಲೀಸ್ ಪೆರೇಡ್ ಗ್ರೌಂಡ್‌ಗೆ ಕಾಂಪೌಂಡ್ ಗೋಡೆ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ಪೊಲೀಸ್ ಪೆರೇಡ್ ಜಾಗವನ್ನು ಸ್ವಚ್ಚತಾ ನಿರ್ವಹಣೆ ಕಾರ್ಯವನ್ನು ಯಾರಿಗೆ ವಹಿಸಲಾಗಿದೆ;